ಹಿಡೀತಾರೆಯೇ ಹೊರತು ನೇರ ದಾರಿ ಅವರಿಗೆ ಗೊತ್ತಿಲ್ಲ. ಇಲ್ದೇ ಹೋದ್ರೆ ಗಣೇಶರನ್ನು ಯಾಕೆ ಅರೆಸ್ಟ್ ಮಾಡ್ಬೇಕಾಗಿತ್ತು? ಅವರೇನು ತಪ್ಪು ಮಾಡಿದ್ದಾರೆ? ಅವರು ನನ್ನ ಮನೆಗೆ ಹೋಗಿದ್ರೂಂತಲ್ವೆ ಪೊಲೀಸರು ಹೇಳೋದು. ಹೋಗ್ಲಿ ಬಿಡಿ. ನನ್ನ ಮನೆಗೆ ಹೋಗೋದಕ್ಕೆ ಡಾ. ಗಣೇಶ್‌ರಿಗೆ ಪರ್ಮಿಶನ್ ಬೇಕೆ? ಟೆಲ್ ಮಿ ನಟರಾಜ್.'

'ಅವರು ಬಾಗಿಲು ಮುರಿದು...'

'ಇಂಪಾಸಿಬಲ್, ಅವರ ಮೇಲೆ ಇಂಥ ಆರೋಪ ಹೊರಿಸೋದನ್ನು ನಾನು ಸಹಿಸೋಲ್ಲ. ನೀವು ದೀಪೂವನ್ನು ರಕ್ಷಿಸೋಕೆ ಪ್ರಯತ್ನಿಸ್ತಾ ಇದ್ದೀರಾಂತ ಅನ್ನಿಸ್ತಾ ಇದೆ.' ನಡುಗುವ ಕೈಯಲ್ಲೆ ಒಂದು ಸಿಗರೇಟು ತೆಗೆದು ಪೆದ್ದು ಪೆದ್ದಾಗಿ ಬಾಯಿಗಿಟ್ಟರು.

'ಬಿ ಕೂಲ್ ಪ್ರೊಫೆಸರ್. ಡಾ. ಗಣೇಶರಿಂದ ಪೊಲೀಸರಿಗೆ ಏನಾದರೂ ವಿಚಾರಗಳನ್ನು ಕೇಳಿ ತಿಳಿದುಕೊಳ್ಳುವುದಕ್ಕಿರಬಹುದು.'

'ಅದಕ್ಕೆ? ಅರೆಸ್ಟ್ ಮಾಡೋದಾ?' ಮದ್ಯದ ಗುಂಗಿನಲ್ಲಿ ಪ್ರೊಫೆಸರ್ ಈ ರೀತಿಯ ಅನೇಕ ಪ್ರಶ್ನೆಗಳನ್ನು ಎಸೆಯುವ ಸಾಧ್ಯತೆಗಳಿದ್ದುದರಿಂದ ಅಲ್ಲಿರುವುದು ಸಮಂಜಸವಲ್ಲವೆಂದು ಭಾವಿಸಿ 'ಗುಡ್‌ನೈಟ್' ಹೇಳುತ್ತ ಮರುದಿನದ ಕೇರಳ ಪ್ರವಾಸದ ತಯಾರಿಗಾಗಿ ನಟರಾಜ್ ತಮ್ಮ ಕೊಠಡಿಗೆ ನಡೆದರು.

## 19

ಅಂತೋಣಿ ನೀಡಿದ ಮಾಹಿತಿಯ ಸಹಾಯದಿಂದ ಕೇರಳದ ತಲಚೇರಿಯಲ್ಲಿ ಇಳಿದವರೇ ನೇರವಾಗಿ ಪೊಲೀಸ್ ಸ್ಟೇಷನ್‌ಗೆ ನಡೆದರು. ತಾವು ಬಂದ ಕಾರಣ ತಿಳಿಯಹೇಳಿ ಓರ್ವ ಕಾನ್ಸ್‌ಟೇಬಲ್‌ನ ಜೊತೆಗೂಡಿ ಉಳ್ಳೋಡಿಗೆ ಹೋದರು. ದೀಪೂನ ಮನೆಯಲ್ಲಿ ಆತನ ದೂರದ ಸಂಬಂಧಿ ಮಥಾಯಿ ವಾಸಿಸುತ್ತಿದ್ದ.

ಪೊಲೀಸರನ್ನು ಕಂಡ ತಕ್ಷಣ ಮಥಾಯಿ ಲಗುಬಗನೆ ಹತ್ತಿರಕ್ಕೆ ಬಂದು, ಒಂದೇ ಸಮನೆ, ಮನೆ ನನ್ನದು ಸಾರ್, ಕಾಗದ ಪತ್ರಗಳೆಲ್ಲ ನನ್ನ ಹತ್ರಾನೆ ಇವೆ. ಹಳತ್ತೆಲ್ಲ ಸುಟ್ಟು ಹೋದ್ದಕ್ಕೆ ಹೊಸ್ತು ಮಾಡಿಸಿದ್ದೇನೆ ಸರ್. ಎಲ್ಲ ನನ್ನ ಹೆಸರಲ್ಲೇ ಇವೆ. ಅವನ ಮಾತು ನಂಬಬೇಡಿ ಸಾರ್. ಕಳೆದ ಐದಾರು ವರ್ಷಗಳಿಂದ ನಾನು ಈ ಮನೆಯಲ್ಲಿ ಇದ್ದೇನೆ. ನನ್ನನ್ನು ಎಬ್ಬಿಸೋದು ಕಾನೂನು ಪ್ರಕಾರ ತಪ್ಪಾಗುತ್ತೆ ಸರ್' ಎನ್ನತೊಡಗಿದ.

ಕಾನ್ಸ್‌ಟೇಬಲ್ ಜೊತೆ ಬಂದುದರಿಂದ ಈತ ಹೆದರಿಹೋಗಿರಬೇಕು ಎಂದುಕೊಂಡ ನಟರಾಜ್, 'ಯಾಕೆ ಹೀಗನ್ತಿ? ಯಾರ ಬಗ್ಗೆ ಮಾತಾಡ್ತೀಯ?' ಎಂದರು.

'ಅವನೇ ಸಾರ್, ಐದು ವರ್ಷ ಉಂಡಾಡಿಯಾಗಿ ತಿರುಗಿ ಈಗ ಬಂದಿದ್ದಾನೆ, ದೊಡ್ಡ ಹಕ್ಕು ಸ್ಥಾಪಿಸ್ಲಿಕ್ಕೆ. ಅವ ಹೇಳೋದೇನು ಗೊತ್ತಾ ಸಾರ್? ಕೊಲ್ತಾನಂತೆ, ಕೊಲ್ತಾನಂತೆ ನನ್ನ'.

'ಯಾರವ? ಏನವನ ಹೆಸರು?'

'ಬಿಡಿ ಸಾರ್, ನಂಗೊತ್ತಿಲ್ವಾ? ಅವ್ನೇ ನಿಮ್ಮನ್ನು ಕಳುಹಿಸಿದ್ದು. ಇನ್ನವನ ಹೆಸರು ಬೇರೆ ಹೇಳ್ಬೇಕಾ?'

'ಯಾರು? ಚಾಕೋನಾ?' ನಟರಾಜ್‌ರ ಮಾತಿನಲ್ಲಿ ಹುದುಗಿದ್ದ ಆತುರವನ್ನು ಯಾರಾದರೂ ಗಮನಿಸಬಹುದಾಗಿತ್ತು'.

'ಹೌದು ಸಾರ್. ಅವ್ನೇ. ಈಗಾಗಲೇ ಎರಡು ಸಲ ಬಂದು ರಂಪ ಮಾಡಿ ಹೋಗಿದ್ದಾನೆ. ಮುಂದಿನ ಬಾರಿ ರೌಡಿಗಳನ್ನು ಕರೆತರುವುದಾಗಿ ಬೆದರಿಕೆ ಹಾಕಿದ್ದಾನೆ.'

'ಎಲ್ಲಿದ್ದಾನೆ ಅವ.'

'ಅದ್ಯಾಕ್ಸಾರ್ ಏನೂ ಗೊತ್ತಿಲ್ಲದವರ ಹಾಗೆ ನಾಟಕ?'

'ಮುಚ್ಚು ಬಾಯಿ. ಕೇಳಿದ್ದಕ್ಕೆ ಮಾತ್ರ ಉತ್ತರ ಕೊಡು' ಅನಿರೀಕ್ಷಿತವಾಗಿ ನಟರಾಜ್ ರೇಗಿದ್ದರು.

'ಅದೇನೊ ಗೊತ್ತಿಲ್ಲ ಸಾರ್, ತಲಚೇರೀಲಿ ಯಾವುದೋ ಹೋಟ್ಲಲ್ಲಿ ಕೆಲಸಕ್ಕೆ ಸೇರಿದ್ದಾನಂತೆ. ಯಾರೋ ಹೇಳಿದ್ರು.'

'ಯಾವ ಹೋಟ್ಲು? ಎಲ್ಲಿದೆ ಆ ಹೋಟ್ಲು?'

'ಅದೇನೂ ಗೊತ್ತಿಲ್ಲ ಸಾರ್. ನಾನೇ ಅದನ್ನು ತಿಳ್ಕೊಂಡುಬಿಟ್ಟು ಪೊಲೀಸ್ ಸ್ಟೇಷನ್‌ನಲ್ಲಿ ಒಂದು ಕಂಪ್ಲೇಂಟು ಕೊಟ್ಟುಬಿಡೋಣಾಂತ ಆಲೋಚನೆ ಮಾಡ್ತಾ ಇದ್ದೆ. ಈಗ ನೋಡಿದ್ರೆ...'

'ಅವನೇನಾದ್ರೂ ಯಾವುದೇ ಹೋಟೆಲಿನಲ್ಲಿ ಕೆಲ್ಸ ಮಾಡೋದು ಗೊತ್ತಾದ್ರೆ ಸ್ಟೇಷನ್‌ಗೆ ಬಂದು ತಿಳಿಸ್ಬಿಡು.'

'ಸರ್ ಸರ್... ನನ್ದೊಂದು ಪ್ರಶ್ನೆ. ನೀವು ನಿಜವಾಗಿ ಹುಡುಕ್ತಿರೋದು ಯಾರನ್ನು?' ಮಥಾಯಿ ತಡವರಿಸುತ್ತ ಕೇಳಿದ.

'ನಿನ್ನನ್ನೇ ಕಣೋ ಹುಚ್ಚ' ಎನ್ನುತ್ತಾ ನಟರಾಜ್ ಮುಸಿನಕ್ಕು, 'ನಿನ್ನ ಅಗತ್ಯ ಬಂದಾಗ ಸ್ಟೇಷನ್‌ಗೆ ಕರೆಸ್ತೇನೆ. ಆಗ ಸ್ಟೇಷನ್ನಿಗೆ ಬಂದು ಏನು ಹೇಳ್ಬೇಕೊ ಅದನ್ನೆಲ್ಲ ಹೇಳು' ಎನ್ನುತ್ತ ಪಿ.ಸಿ.ಗೆ ಹೊರಡುವಂತೆ ತಿಳಿಸಿದರು. ಮಥಾಯಿಯ ಗೊಂದಲ ಮತ್ತೂ ಹೆಚ್ಚಾಯಿತು.

ಜೀಪಿನ ಬಳಿಗೆ ಬರುತ್ತಿದ್ದಂತೆಯೆ ಹಿಂದಿನಿಂದ ಬಂದ ಮಥಾಯಿ ಮಲೆಯಾಳದಲ್ಲಿ ಕಾನ್ಸ್‌ಟೇಬಲ್ ಜೊತೆ ಚಾಕೊ ಬಗೆಗೆನ ಇತರ ವಿವರಗಳನ್ನು ತಿಳಿಯಲು ಯತ್ನಿಸುತ್ತಿದ್ದ. ಆತ ತನ್ನ ಮೇಲೆ ಕೇಸ್ ಕೊಟ್ಟಿದ್ದಾನಾ? ತನ್ನ ಮೇಲೆ ಕರ್ನಾಟಕದಲ್ಲೇ ಕೇಸ್ ಕೊಟ್ಟಿದ್ದಾನಾ? ಇವರ್ಯಾಕೆ ಕರ್ನಾಟಕದಿಂದ ನನ್ನನ್ನು ಹುಡುಕಿ ಬಂದಿದ್ದಾರೆ? ಇತ್ಯಾದಿ. ಕಾನ್ಸ್‌ಟೇಬಲ್ ತನಗೇನೂ ಗೊತ್ತಿಲ್ಲವೆಂದು ಹೇಳಿ ತಪ್ಪಿಸಿಕೊಳ್ಳುತ್ತಿದ್ದುದನ್ನು ನಟರಾಜ್ ಗಮನಿಸಿದ್ದರು.

ಸ್ಟೇಷನ್ನಿಗೆ ಬಂದವರೇ ತನ್ನ ಮಾತುಗಳನ್ನು ತರ್ಜುಮೆ ಮಾಡಲು ಸಹಕರಿಸಿದ ಪೊಲೀಸ್ ಕಾನ್ಸ್‌ಟೇಬಲ್‌ನ ಸಹಾಯವನ್ನು ಸ್ಮರಿಸಿ, ಜೀಪ್ ಕೊಟ್ಟ ಸಬ್‌ಇನ್ಸ್‌ಪೆಕ್ಟರ್‌ಗೆ ಧನ್ಯವಾದ ಸೂಚಿಸಿ ನಟರಾಜ್ ತನ್ನ ಕೊಠಡಿಗೆ ಹಿಂದಿರುಗಿದರು.

ತಲಚೇರಿ ಅಂಥ ದೊಡ್ಡ ಪಟ್ಟಣವೇನಲ್ಲ. ತಾನು ಉಳಿದುಕೊಂಡ ಹೋಟೆಲಿನ ಸ್ವಾಗತಕಾರನಲ್ಲಿ ಪಟ್ಟಣದ ಪ್ರಮುಖ ಹೋಟೆಲುಗಳ ಬಗ್ಗೆ ವಿವರ ತಿಳಿದುಕೊಂಡರು. ಬೆಂಗಳೂರಿನ– ದೀಪೂನ– ಅನುಭವದ ಹಿನ್ನೆಲೆಯಲ್ಲಿ ಆತ ಹೆಂಡ–ಹೆಣ್ಣು ಸಂಬಂಧವಾದ ಹೋಟೆಲಿನಲ್ಲಿ ಇರುವ ಸಾಧ್ಯತೆ ಹೆಚ್ಚು ಎಂಬುದನ್ನು ಗಟ್ಟಿಮಾಡಿಕೊಂಡರು. ಸಂಜೆ ಹೋಟೆಲುಗಳು ಚುರುಕಾಗುವ ಹೊತ್ತಿಗೆ ನಟರಾಜ್ ತಾವೂ ಹೊರಹೊರಟರು. ಒಂದೊಂದೇ ಹೋಟೆಲಿಗೆ ಬೇರೆ ಬೇರೆ ನೆಪವೊಡ್ಡಿ ಎಡತಾಕಿದರು. ಹೊಸತಾಗಿ ಕೆಲಸಕ್ಕೆ ಸೇರಿದವರಿದ್ದಾರೆಯೆ ಎಂದು ನೇರವಾಗಿ ಮಾಲಕರನ್ನು ಕೇಳಿದರೆ ನಕಾರಾತ್ಮಕ ಉತ್ತರ ದೊರೆಯುತ್ತಿತ್ತು. ಒಂದಷ್ಟು ಪಾನೀಯ ಹೀರುತ್ತ, ಆ ಪ್ರದೇಶದ ವಿವರಗಳನ್ನು ತಿಳಿದುಕೊಳ್ಳುವ ನೆಪದಲ್ಲಿ ಪಕ್ಕದಲ್ಲಿದ್ದ ಹಲವಾರು ಗಿರಾಕಿಗಳನ್ನು ಪ್ರಶ್ನಿಸಿದರು. ಅಂತೂ ಆ ದಿನದ ಕಾರ್ಯಕ್ರಮ ಫಲಪ್ರದವಾಗಲಿಲ್ಲ.

ಪೊಲೀಸರಿಗೆ ಸಹಾಯ ಮಾಡಲು ಹೇಳಬಹುದಾಗಿತ್ತು. ಅವರು ಒಂದೊಂದು ಹೋಟೆಲಿನವರನ್ನು ಹಿಡಿದು ತಂದು ಛಡಿಯೇಟು ಬಿಗಿದು ಅವರ ಬಾಯಿ ಬಿಡಿಸಲೆತ್ನಿಸುವ ಸಾಹಸವೇ ನಟರಾಜ್‌ಗೆ ಅಹಸ್ಯವಾಗಿತ್ತು. ನಡುವೆ ಇನ್ಯಾವುದೋ ಹೋಟೆಲ್‌ನಲ್ಲಿರುವ ಚಾಕೋಗೆ ಸುದ್ದಿ ಮುಟ್ಟಿ ಆತ ಅಲ್ಲಿಂದ ಪರಾರಿಯಾಗುವ ಸಾಧ್ಯತೆಗಳೂ ಇದ್ದುವು. ಮೇಲಾಗಿ ಹೊರಗಿನಿಂದ ಬಂದವನಾಗಿ ಕೇರಳದ ಪೊಲೀಸರ ಸಹಕಾರವನ್ನು ಪೂರ್ಣವಾಗಿ ನಂಬಬಹುದೆ? ಈ ಎಲ್ಲ ಕಾರಣಗಳಿಗಾಗಿ ನಟರಾಜ್ ತಾವೊಬ್ಬರೇ ಹೊರಡುವುದೆಂದು ತೀರ್ಮಾನಿಸಿದರು.

ಮರುದಿನ ತಮ್ಮ ಹುಡುಕಾಟಕ್ಕೆ ನಟರಾಜರು ಬೇರೆಯೇ ರೂಪ ಕೊಡಲು ಉದ್ದೇಶಿಸಿದರು. ನಡುವೆ ಪೊಲೀಸ್ ಸ್ಟೇಷನ್ನಿನಿಂದ ಫೋನ್ ಬಂತು. ನಟರಾಜ್ ಪಟ್ಟಣಶೆಟ್ಟರು ಸ್ಟೇಷನ್ನಿಗೆ ತಲುಪಿದರು. ಚಾಕೊನನ್ನು ಹುಡುಕುವ ಹಕ್ಕು ತಮ್ಮದೆಂದೂ ಅವನೇನಾದರೂ ಸೆರೆ ಸಿಕ್ಕರೆ ತಕ್ಷಣ ತಮಗೂ ತಿಳಿಸುವವೆಂದೂ ಸದ್ಯಕ್ಕೆ ತಾವು ಕರ್ನಾಟಕಕ್ಕೆ ಹಿಂದಿರುಗಬಹುದೆಂದೂ ಪೊಲೀಸ್ ಇನ್ಸ್‌ಪೆಕ್ಟರ್ ವಾದಿಸಿದರು. ಯಾವುದೇ ರಾಜ್ಯದಲ್ಲಿ ತಾನು ಪೊಲೀಸ್ ಸಹಾಯ ಕೇಳಿದರೆ ಕೊಡಬೇಕಾದುದಷ್ಟೆ ಆಯಾ ರಾಜ್ಯದ ಪೊಲೀಸರ ಜವಾಬ್ದಾರಿ. ಇದರಲ್ಲಿ ಹಕ್ಕುಬಾಧ್ಯತೆಯ ಪ್ರಶ್ನೆ ಉದ್ಭವಿಸುವುದಿಲ್ಲ. ತಾನು ಸಿ.ಐ.ಡಿ. ಅಧಿಕಾರಿಯಾಗಿ ಕರ್ನಾಟಕಕ್ಕೆ ಬಂದಿದ್ದು, ತನ್ನ ಕೆಲಸ ಪೂರ್ತಿಯಾಗಬೇಕಿದ್ದರೆ ಕೇರಳದಲ್ಲಷ್ಟೇ ಅಲ್ಲ; ದೇಶದ ಯಾವ ಮೂಲೆಯಲ್ಲಾದರೂ ಕೆಲಸ ಮಾಡುವ ಅಗತ್ಯವಿರುತ್ತದೆ ಎಂಬುದನ್ನು ತಿಳಿಸಿ, ತಮಗಿನ್ನೂ ಪೊಲೀಸ್ ಸಹಾಯ ಬೇಕಾದೀತೆಂದೂ ಹೇಳಿ, ತಕ್ಷಣ ನಟರಾಜ್ ದೆಹಲಿಯ ಹೆಡ್ ಕ್ವಾರ್ಟರ್ಸನ್ನು ಸಂಪರ್ಕಿಸಿದರು. ಫೋನನ್ನು ಸಬ್ ಇನ್ಸ್‌ಪೆಕ್ಟರ್ ಕೈಯಲ್ಲಿ ಕೊಟ್ಟು – 'ಮಾತಾಡಿ' ಎಂದರು.

ಸಬ್‌ಇನ್ಸ್‌ಪೆಕ್ಟರ್ ಫೋನೆತ್ತಿ, ಪ್ರತಿ ಮಾತಿಗೆ 'ಎಸ್ ಸರ್, ಎಸ್ ಸರ್, ಎಸ್ ಸರ್' ಎನ್ನುತ್ತಿದ್ದರು. ಕೊನೆಗೊಮ್ಮೆ ರಿಸೀವರ್ ಕೆಳಗಿಟ್ಟು ಎಟೆನ್ಶನ್‌ನಲ್ಲಿ ನಟರಾಜ್‌ಗೆ ಸೆಲ್ಯೂಟ್ ಹೊಡೆದು 'ಎಸ್ ಸರ್' ಎಂದರು. ಸಂಜೆಯಾಗುತ್ತಲೆ ನಗರದ ಪ್ರಸಿದ್ಧ ಕ್ಯಾಬರೆ ನರ್ತನವಿರುವ ಅದೇ ಹೋಟೆಲ್‌ಗೆ ನಟರಾಜ್ ಭೇಟಿ ನೀಡಿದರು. ದೀಪೂವಿನ ಆಸಕ್ತಿಯ ವಲಯವೂ ಅದೇ ಅಥವಾ ಅಂಥದ್ದೇ ಆಗಿರಬಹುದಾದ್ದರಿಂದ ಒಳಹೊಕ್ಕು